**ಈ ದಿನ ದಿನಾಂಕಃ 25.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರರಿಂದಃ</u>**

1. ಮೊದಲು 04-09 ಗಂಟೆಗೆ ಗಾಯಾಳುವೊಂದಿಗೆ ಆಕೆಯ ಗಂಡ ಇದ್ದರು, ನಂತರ ಅವರ ಅತ್ತೆ-ಮಾವ ಬಂದರು, ಅವರನ್ನು ಕೂಡ ನಾನು ಘಟನೆ ಹೇಗೆ ಆಯಿತು ಎಂದು ಕೇಳಿರುತ್ತೇನೆ, ಅದಕ್ಕೆ ಅವರು ಉತ್ತರಿಸಿರುತ್ತಾರೆ. ಸಾಮಾನ್ಯವಾಗಿ ನಾವು ಗಾಯಾಳವೊಂದಿಗೆ ಬಂದಂತಹ ವ್ಯಕ್ತಿಗಳನ್ನು ಕೇಳಿದಾಗ ಅವರ ಉತ್ತರ ಬರೆಯಬೇಕಾಗುತ್ತದೆ ಎಂದರೆ ನಾನು ಬರೆದಿರುತ್ತೇನೆ. ಅತ್ತೆ-ಮಾವ, ಗಂಡ ಮನೆಯಿಂದ ಹೊರಗೆ ಹೋಗಿದ್ದಾಗ ಗಾಯಾಳು ಒಬ್ಬಳೇ ಮನೆಯಲ್ಲಿ ಮಲಗಿದ್ದಾಗ ಅಪರಿಚಿತ ವ್ಯಕ್ತಿಗಳು ಬಂದು ಹಲ್ಲೆ ಮಾಡಿದ್ದರು ಎಂದು ನನಗೆ ಹೇಳಿದ್ದರು, ಅದನ್ನು ನಾನು ನಮೂದು ಮಾಡಿದ್ದೆ ಎಂದರೆ ಸರಿಯಲ್ಲ. ಮುಂದುವರೆದು ಈ ರೀತಿ ಅವರು ನನ್ನ ಮುಂದೆ ಹೇಳಿರಲಿಲ್ಲ. ಗಂಡನನ್ನು ವಿಚಾರಿಸಿದಾಗ ಅವರು ಕೊಟ್ಟ ಉತ್ತರವನ್ನು ನಾನು ನಮೂದು ಮಾಡಿದ್ದೇನೆ, ಬೆಳಗಿನ 4-09 ಗಂಟೆ ಸಮಯಕ್ಕೆ ಅವರು ಬರುವ ಪೂರ್ವದಲ್ಲಿ ಘಟನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಪುನಃ ಬೆಳಗಿನ ಜಾವ 04-09 ಗಂಟೆಗೆ ಅವರನ್ನು ವಿಚಾರಿಸಲು ನನಗೆ ಅವಶ್ಯಕತೆ ಕಂಡುಬಂದಿತ್ತು. ಅದಕ್ಕಿಂತ ಪೂರ್ವದಲ್ಲಿ ಗಂಡ ನನಗೆ ಗಾಯಾಳುವಿಗೆ ಯಾರು ಹಲ್ಲೆ ಮಾಡಿರುತ್ತಾರೆ ಎಂದು ನನಗೆ ತಿಳಿಸಿದ್ದರು. ನಾನು ಬರೆದುಕೊಂಡಿದ್ದನ್ನು ಪೋಲಿಸರಿಗೆ ಕೊಟ್ಟಿದ್ದೆ. ನಿಪಿ 38 ರಲ್ಲಿ ಯಾರು ಹಲ್ಲೆ ಮಾಡಿರುತ್ತಾರೆಂದು ನಮೂದು ಇಲ್ಲ ಎಂದರೆ ಸರಿ. ನಿಪಿ 39 ರಲ್ಲಿ ಬರೆದಿರುವ ಹಲ್ಲೆ ಮಾಹಿತಿ ನನಗೆ ಯಾರು ಕೊಟ್ಟಿದ್ದರು ಎಂದು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ30 ನ್ನು 12.04.2023 ರಂದು ಪೋಲಿಸರಿಗೆ ಕೊಡಲಾಗಿದೆ ನಿಖರವಾದ ಸಮಯ ಹೇಳಲು ಆಗುವುದಿಲ್ಲ. ದಾಖಲೆಗಳ ಆಧಾರದ ಮೇಲೆ ಅದನ್ನು ನಾನು ನಮೂದು ಮಾಡಿರುತ್ತೇನೆ, ಸದರಿ ದಾಖಲೆಯನ್ನು ತನಿಖಾಧಿಕಾರಿ ಹಿಂಬರಹ ಇದೆಯೋ ಇಲ್ಲವೊ ಎಂದು ಗೊತ್ತಿಲ್ಲ, ಮುಂದುವರೆದು ಸಾಕ್ಷಿ ಹತ್ತಿರ ಇರುವ ಮೂಲ ಎಮ್.ಎಲ್.ಸಿ ಯಲ್ಲಿ ಪಡೆದಿರುವ ಬಗ್ಗೆ ಇಲ್ಲ. ದಿನಾಂಕ 12.04.2023 ರಂದು ಬೆಳಗಿನ ಜಾವ 1.50 ರಂದು ಪೋಲಿಸರು ಆಸ್ಪತ್ರೆಯಲ್ಲಿ ಇದ್ದರು. ಎಷ್ಟು ಜನ ಹಾಗೂ ಅವರ ಹುದ್ದೆ ನನಗೆ ಗೊತ್ತಿಲ್ಲ. ಅವರು ಕೂಡ ನನ್ನ ಹತ್ತಿರ ಹಲ್ಲೆ ಹಿನ್ನೆಲೆ ಬಗ್ಗೆ ಮಾತನಾಡಿದ್ದರು, ಪೋಲಿಸರು ಗಾಯಾಳುವೊಂದಿಗೆ ಬಂದಿರುವವರ ಜೊತೆ ಕೂಡ ಈ ಬಗ್ಗೆ ಮಾತನಾಡಿದರು ಎಂದರೆ ನನಗೆ ಗೊತ್ತಿಲ್ಲ, ಬೆಳಗಿನ ಜಾವ 04 ಗಂಟೆವರೆವಿಗೆ ಪೋಲಿಸರು ಇದ್ದರು ಎಂದರೆ ಗೊತ್ತಿಲ್ಲ, ಮುಂದುವರೆದು ನಾನು ಗಾಯಾಳುವೊಂದಿಗೆ ಇದ್ದೆ, ಗಾಯಾಳು ನನ್ನ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಳು, ಪೋಲಿಸರು ಆಸ್ಪತ್ರೆಗೆ ಬೆಳಗಿನ ಜಾವ 1-50

ಕ್ಕಿಂತ ಮುಂಚೆ ಬಂದಿದ್ದರು. ನಿಖರವಾದ ಸಮಯ 1 ಗಂಟೆ ಮುಂಚೆ ಬಂದಿದ್ದರು ಎಂದರೆ ಗೊತ್ತಿಲ್ಲ.

2. ಗಾಯಾಳು ಸ್ಪಂದಿಸುತ್ತಿದ್ದ ಬಗ್ಗೆ ಪೋಲಿಸರಿಗೆ ನಾನು ತಿಳಿಸಿರಲಿಲ್ಲ. ಪೋಲಿಸರು ಎಮರ್ಜೆನ್ಸಿ ರೂಮ್ ನಲ್ಲಿ ನನ್ನ ಹತ್ತಿರ ಗಾಯಾಳುವಿನ ಸ್ಥಿತಿ ವಿಚಾರಿಸಿದರು, ನಾನು ಪೋಲಿಸರಿಗೆ ಲಿಖಿತವಾ ಆಕೆಯ ಸ್ಥಿತಿ ಬಗ್ಗೆ ಬರೆದುಕೊಟ್ಟಿದ್ದೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಪೋಲಿಸರು ಸ್ಥಿತಿಯ ಬಗ್ಗೆ ಕೇಳಿದಾಗ ನಾವು ಲಿಖಿತವಾಗಿ ಕೊಡಬೇಕು ಎಂದರೆ ಸರಿ. ಗಾಯಾಳುವಿನ ಡೈಯಿಂಗ್ ಡಿಕ್ಲೇರೇಶನ ಕೊಡುವಾಗ ಆಕೆ ಸ್ಥಿತಿ ಹೇಗಿದೆ ಎಂಬುದರ ಬಗ್ಗೆ ಲಿಖಿತವಾಗಿ ಕೊಡುತ್ತೇವೆ. ಸದರಿ ರೂಮ್ ನಲ್ಲಿ ನಾನು ಹಾಗೂ ಅನೆಸ್ತೆಷಿಯಾ ವೈದ್ಯರು ಮತ್ತು ಪೋಲಿಸರು ಇದ್ದೆವು.

3. ಆಕೆಯ ಡೈಯಿಂಗ್ ಡಿಕ್ಲೇರೇಶನ ತೆಗೆದುಕೊಳ್ಳಲು ಪೋಲಿಸರು ಎಮರ್ಜೆನ್ಸಿ ರೂಮ್ ಗೆ ಬಂದಿದ್ದರು. ರಿಸ್ಪಶ್ ನಲ್ಲಿ ಇರುವ ಸಿಬ್ಬಂದಿ ಸಾಮಾನ್ಯವಾಗಿ ಗಾಯಾಳು ಜೊತೆಗೆ ಬರುವವರ ಸಹಿಯನ್ನು ಪಡೆದುಕೊಳ್ಳುತ್ತಾರೆ. ಸದರಿ ಪ್ರಕರಣದಲ್ಲಿ ಗಾಯಾಳುವಿನ ಜೊತೆಗೆ ಬಂದವರ ಸಹಿಯನ್ನು ಪಡೆದುಕೊಂಡಿದ್ದರೋ ಇಲ್ಲವೊ ಎಂದು ನನಗೆ ಗೊತ್ತಿಲ್ಲ, ಬೆಳಗಿನ ಜಾವ 12 ರಿಂದ 2-00-4-00 ಗಂಟೆ ಅವಧಿಯಲ್ಲಿ ಗಾಯಾಳುವಿನ ಗಂಡನ ಸಹಿಯನ್ನುಆಸ್ಪತ್ರೆಯ ದಾಖಲೆಯಲ್ಲಿ ಪಡೆದುಕೊಂಡಿಲ್ಲ ಏಕೆಂದರೆ ಅವರು ಇರಲಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ಗಂಡ ಆಸ್ಪತ್ರೆಯಲ್ಲಿ ಇದ್ದರು. ಗಂಡ ಆಸ್ಪತೆಯಲ್ಲಿ ಇದ್ದರು ಎಂಬ ಬಗ್ಗೆ ಪೋಲಿಸರ ಹೇಳಿಕೆ ಮೇರೆಗೆ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಮುಂದುವರೆದು ನಾನು ಅವರೊಂದಿಗೆ ಮಾತನಾಡಿದ್ದೇನೆ, ಈ ಬಗ್ಗೆ ಆಸ್ಪತ್ರೆಯಲ್ಲಿ ಸಿಸಿಟಿವಿ ಫುಟೆಜ್ ಇದೆ. ಇದನ್ನು ಪೋಲಿಸರಿಗೆ ಕೊಟ್ಟಿದ್ದೀರಿ ಎಂದರೆ ಅವರು ಕೇಳಲಿಲ್ಲ ನಾನು ಕೊಟ್ಟಿಲ್ಲ. ಬೆಳಗಿನ ಜಾವ 12 ರಿಂದ 2 ಗಂಟೆ ವರೆಗೆ ಸಿಸಿಟಿವಿ ಫುಟೆಜ್ ನಲ್ಲಿ ಗಂಡನ ಚಿತ್ರ ಇಲ್ಲ ಎಂದರೆ ಸರಿಯಲ್ಲ, ಯಾವತ್ತು ನಾನು ಸಿಸಿಟಿವಿ ಫುಟೆಜ್ ನೋಡಿಲ್ಲ. ನಿಪಿ 38 ರಿಂದ 40 ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

4. ಪೋಲಿಸರು ಆಸ್ಪತ್ರೆಗೆ ಗಾಯಾಳುವನ್ನು ಕರೆತಂದಿದ್ದರು ಎಂದರೆ ಸರಿಯಲ್ಲ. ನಿಪಿ 43 ಪೋಲಿಸರ ಕೋರಿಕೆ ಮೇರೆಗೆ ತಯಾರು ಮಾಡಲಾಗಿದೆ ಎಂದರೆ ಸರಿಯಲ್ಲ. ಬೆಳಗಿನ ಜಾವ 4-09 ಗಂಟೆಗೆ ನಾನು ಶ್ಯಾಮರಿದಾಸರನ್ನು ಮೊದಲನೇ ಬಾರಿಗೆ ನೋಡಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ